ತಮಿಳುನಾಡಿನ ನಾಯನಾರ್ ಸಂತರು – ೩

# ಚಂಡೇಶ್ವರ ನಾಯನಾರ್

ಕಥೆ: ಪರುತ್ತಿಯಾರ್ ಕೆ. ಸಂತಾನರಾಮನ್

ಚಿತ್ರ : ಶಂಕರ್


ಚೋಳ ಸಾಮ್ರಾಜ್ಯದಲ್ಲಿ ಮನ್ನಿ ನದಿಯ ತೀರದಲ್ಲಿ ತಿರುಸೇಯ್ಞಲೂರ್ ಎಂಬ ಊರಿತ್ತು . ಅಲ್ಲಿ ಯಜ್ಞದತ್ತ ಹಾಗೂ ಪವಿತ್ರ ಎಂಬ ದಂಪತಿಗಳಿಗೆ ಮಗನಾಗಿ ಹುಟ್ಟಿದವನೇ ವಿಚಾರ ಶರ್ಮ.









3 ವಿಚಾರಶರ್ಮ ವೇದಗಳನ್ನು ಕಲಿತ.





4 ಒಂದು ದಿನ ವಿಚಾರಶರ್ಮನು ತನ್ನ ಸ್ನೇಹಿತರೊಂದಿಗೆ ವೇದ ಪಾಠಶಾಲೆಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಒಬ್ಬ ಗೋವಳ ಹಸುವೊಂದನ್ನು ಬೆತ್ತದಿಂದ ಹೊಡೆಯುತ್ತಿದ್ದುದನ್ನು ಕಂಡ.





ಗೋವಳನು ಕೊಟ್ಟ ಏಟನ್ನು ತಡೆಯಲಾರದೆ, ಹಸು ನೋವಿನಿಂದ ಕೆಳಕ್ಕೆ ಬಾಗಿತು. ವಿಚಾರಶರ್ಮನಿಗೆ ಇದನ್ನು ನೋಡಲಾಗಲಿಲ್ಲ


5
ಎಲೈ ಕಲ್ಲೆದೆಯ ಗೋವಳ! ನಮಗೆ ಹಾಲು ನೀಡುವ ಹಸುವಿಗೆ ಹೊಡೆಯುವುದು ಒಳ್ಳೆಯದೆ? ದೇವರ ಅಭಿಷೇಕಕ್ಕೆ ಉಪಯೋಗಿಸುವ ಹಾಲನ್ನು ಹಾಗೂ ಬೇರೆ ಉತ್ತಮ ವಸ್ತುಗಳನ್ನು ನೀಡುವ ಹಸು ದೇವರಿಗೆ ಸಮಾನ. ಅದನ್ನು ನಾವು ಪ್ರೀತಿಯಿಂದ ನೋಡಬೇಡವೆ?
6
ಗೆಳೆಯರೇ, ನೀವೆಲ್ಲ ಪಾಠಶಾಲೆಗೆ ಹೋಗಿ. ಇನ್ನು ಮುಂದೆ ನಾನೇ ದನಕಾಯುತ್ತೇನೆ. ಹಸುಗಳ ಯೋಗಕ್ಷೇಮ ನೋಡಿಕೊಳ್ಳುತ್ತೇನೆ.
7
ವಿಚಾರಶರ್ಮನು ಹಸುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ. ಹಸುಗಳು ತುಂಬಾ ಹಾಲು ಕೊಡುತ್ತವೆ.
ನಿಜ. ಇತ್ತೀಚೆಗೆ ದೇವರ ಅಭಿಷೇಕಕ್ಕೆ ಮತ್ತು ಮಕ್ಕಳಿಗೆ ತುಂಬಾ ಹಾಲು ಸಿಗುತ್ತಿದೆ.
8
ಶಿವನ ಅನುಗ್ರಹದಿಂದ, ಕ್ರಮೇಣ ವಿಚಾರಶರ್ಮನಿಗೆ ಶಿವನ ಮೇಲೆ ಅಪಾರ ಭಕ್ತಿ ಬೆಳೆಯಿತು. ಒಂದು ದಿನ ಅವನು ನದೀತೀರಕ್ಕೆ ಹಸುಗಳನ್ನು ಹುಲ್ಲು ಮೇಯಿಸಲು ಕರೆದುಕೊಂಡು ಹೋಗುತ್ತಿದ್ದ. ಅವನು ಅಲ್ಲಿ ಒಂದೆಡೆ ಒಂದು ಶಿವಲಿಂಗವನ್ನು ಮರಳಿನಿಂದ ಮಾಡಿ ದನಗಳಿಗೆ ಹೇಳಿದ....
ಅಮ್ಮಾ, ದನಗಳೇ! ಶಿವನ ಅಭಿಷೇಕಕ್ಕಾಗಿ ನೀವು ಚೆನ್ನಾಗಿ ಹಾಲು ನೀಡಿರಿ.

9 ಅವನು ಹಾಲನ್ನು ಕರೆದು, ಶಿವಲಿಂಗಕ್ಕೆ ಅಭಿಷೇಕ ಮಾಡಿದ.





10 ವಿಚಾರಶರ್ಮನ ವಿಚಿತ್ರ ನಡವಳಿಕೆಯನ್ನು ಕಂಡ ಪಂಡಿತರು ಈ ಸುದ್ದಿಯನ್ನು ಯಜ್ಞದತ್ತನಿಗೆ ತಿಳಿಸಿದರು.




11 ಯಜ್ಞದತ್ತನು ನದೀತೀರಕ್ಕೆ ಹೋಗಿ, ತನ್ನ ಮಗ ಏನು ಮಾಡುತ್ತಿದ್ದಾನೆ ಎಂದು ನೋಡಿದ.





12




ಯಜ್ಞದತ್ತನು ಕೋಪದಿಂದ ಹಾಲಿನ ಪಾತ್ರೆಯನ್ನು ಒದ್ದುಬಿಟ್ಟ. ಶಿವನಿಗೆ ಅಪಚಾರವಾದುದನ್ನು ನೋಡಿ ವಿಚಾರ ಶರ್ಮನಿಗೆ ಕೋಪವುಕ್ಕಿ ಬಂತು. ಅಲ್ಲೇ ಬಿದ್ದಿದ್ದ ಒಂದು ಬೆತ್ತವನ್ನು ಅವನು ಚಿನ್ನದ ಕೊಡಲಿಯಾಗಿ ಪರಿವರ್ತಿಸಿದ.

13





ಯಜ್ಞದತ್ತನು ಅಲ್ಲೇ ಬಿದ್ದು ಸತ್ತುಹೋದ.

14




15 ಅಷ್ಟರಲ್ಲಿ ವಿಚಾರಶರ್ಮನಿಗೆ ಶಿವ ಪ್ರತ್ಯಕ್ಷನಾದ.




ಶಿವನು ವಿಚಾರಶರ್ಮನ ಬೆನ್ನು ತಟ್ಟಿ, ತನ್ನ ತಲೆಯಲ್ಲಿದ್ದ ವಿಶೇಷವಾದ ಹೂವಿನ ಹಾರವನ್ನು ಅವನ ತಲೆಯ ಮೇಲಿಟ್ಟ.

16 ವಿಚಾರಶರ್ಮನು ಕೈಲಾಸವನ್ನು ಸೇರಿ, ಚಂಡೇಶ್ವರ ಪದವಿಯಲ್ಲಿ ಕುಳಿತ. ಅವನನ್ನು ಶಿಕ್ಷಿಸಿದ ಅವನ ತಂದೆಯೂ ಶಿವಲೋಕವನ್ನು ಸೇರಿದ. ಚಂಡೇಶ್ವರ ಅನುಗ್ರಹಮೂರ್ತಿಯು ಶಿವನ 64 ರೂಪಗಳಲ್ಲಿ ಒಂದು. ಅದರ ಮೂರ್ತಿಯನ್ನು ಗಂಗೈಕೊಂಡ ಚೋಳಪುರದಲ್ಲಿ ಕಾಣಬಹುದು.



''ಯಶಸ್ಸನ್ನು ಪಡೆದ ಎಲ್ಲ ವ್ಯಕ್ತಿಯ ಹಿಂದೆ ಎಲ್ಲೋ ಒಂದೆಡೆ ಅದ್ಭುತ ಬುದ್ಧಿಶಕ್ತಿ, ಅಸಾಧಾರಣ ಪ್ರಾಮಾಣಿಕತೆಯಿರುತ್ತವೆ. ಇವೇ ಆತನ ಯಶಸ್ಸಿಗೆ ಕಾರಣವಾಗುತ್ತದೆ.''

— ಸ್ವಾಮಿ ವಿವೇಕಾನಂದ